# ಸಾರ್ವತ್ರಿಕ ಶಿಕ್ಷಕರ ಗುರುತು ಇದೆಯೇ? ಒಂದು ವಿಭಿನ್ನ ಪ್ರಸ್ತಾಪ

– *ಗೌರಿ ಶ್ರೀಹರಿ*

## ಲೇಖನದ ಸಾರಾಂಶ

*ವಿದ್ಯಾರ್ಥಿಯನ್ನು ಸಮಗ್ರ ಮಾನವನನ್ನಾಗಿ ರೂಪಿಸುವುದೇ ಶಿಕ್ಷಣದ ಗುರಿಯಾಗಿದೆ. ಈ ನೆಲೆಯಲ್ಲಿ ನೋಡಿದಾಗ ಒಬ್ಬ ಶಿಕ್ಷಕ ಅಪೇಕ್ಷಿತ ಮಾನವನ ಪರಿಕಲ್ಪನೆಯ ಅರಿವನ್ನು ಹೊಂದಬೇಕಾಗಿದ್ದು ಅದನ್ನು ಅರಿಯುವ ಪ್ರಕ್ರಿಯೆಯಲ್ಲಿ ತನ್ನನ್ನೇ ತಾನು ರೂಪಿಸಿಕೊಳ್ಳಬೇಕಾಗಿದೆ. ಮಾನವನಿಗೂ ಅಸ್ತಿತ್ವದಲ್ಲಿರುವ ಇತರ ಜೀವಿಗಳಿಗೂ ಇರುವ ಸಂಬಂಧಗಳನ್ನು ಗಟ್ಟಿಗೊಳಿಸಲು ಪೂರಕವಾದ ಸ್ವ-ಅರಿವು ಮತ್ತು ಸ್ವಯಂ ಪರಿವೀಕ್ಷಣೆಯನ್ನು ಒಳಗೊಂಡ ಸಾರ್ವತ್ರಿಕ ಗುರುತನ್ನು ಶಿಕ್ಷಕ ಬೆಳೆಸಿಕೊಳ್ಳಬೇಕೆಂಬ ಆಶಯ ಈ ಲೇಖನದ್ದಾಗಿದೆ. ಸ್ವ-ಅರಿವನ್ನು ಬೆಳೆಸಿಕೊಂಡಿರುವ ಶಿಕ್ಷಕ ವಿದ್ಯಾರ್ಥಿಗಳಲ್ಲಿ ಹುದುಗಿರುವ ಅಂತಃಸತ್ವವನ್ನು ಬೆಳೆಸುವ ಮೂಲಕ ಸಾಮರಸ್ಯದ ಬದುಕಿಗೆ ಅಣಿಗೊಳಿಸುವುದು ಸಾಧ್ಯವಾಗುತ್ತದೆ ಎಂಬ ಧ್ವನಿ ಇಲ್ಲಿ ವ್ಯಕ್ತವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಕರ ಬೆಳವಣಿಗೆಗೆ ಪೂರಕವಾಗುವಂತಹ ವೃತ್ತಿಪರ ಬೆಳವಣಿಗೆಯ ಅವಕಾಶಗಳನ್ನೊಳಗೊಂಡ ಚೌಕಟ್ಟನ್ನು ಇದು ಒದಗಿಸುತ್ತದೆ.*

## ಪೀಠಿಕೆ

ಗತಕಾಲದಿಂದ ಮಾನವನು ಸ್ವಯಂ ಜೀವನದಲ್ಲಿ ಸಾಮರಸ್ಯ ಹೊಂದಿದ್ದು ನೈಸರ್ಗಿಕ ಮತ್ತು ಸಾಮಾಜಿಕ ಪರಿಸರದೊಂದಿಗೆ ಸಾಮರಸ್ಯದಿಂದ ಬಾಳಬೇಕೆಂಬುವುದು ಮಾನವನ ಮೂಲ ಆಕಾಂಕ್ಷೆಯಾಗಿದೆ.

ಮಾನವರಾದ ನಾವು ಸಂತೋಷ, ಸಂತೃಪ್ತಿ, ಸಮೃದ್ಧಿ ಮತ್ತು ಸ್ವಾವಲಂಬನೆ ಬಯಸುತ್ತೇವೆ ಮತ್ತು ಉತ್ತಮ ಶಿಕ್ಷಣದಿಂದ ಈ ಗುರಿಯನ್ನು ಸಾಧಿಸಬಹುದೆಂದು ನಂಬುತ್ತೇವೆ. ಈ ಗುರಿಯನ್ನು ತಲುಪಲು, ಮಕ್ಕಳನ್ನು ತಯಾರಿಸುವ ಜವಾಬ್ದಾರಿಯನ್ನು ಶಿಕ್ಷಕರು ಹೊತ್ತಿದ್ದಾರೆ. ಶಿಕ್ಷಣವು ಹೆಚ್ಚು ಸಾಕ್ಷರತೆ, ಹೆಚ್ಚು ಅಧಿಕಾರದ ಭಾವ, ಸುಧಾರಿತ ಶೈಕ್ಷಣಿಕ ಕೌಶಲಗಳು ಮತ್ತು ಜಗತ್ತಿನೊಂದಿಗೆ ವ್ಯವಹರಿಸುವ ಉನ್ನತ ಸಾಮರ್ಥ್ಯವನ್ನು ನೀಡಿದೆ. ಆದರೆ ನಾವು ನಮ್ಮ ಸಂತೃಪ್ತಿ ಹಾಗೂ ಶಾಂತಿಯಿಂದ ಬಾಳುವ ಗುರಿಯ ಸಮೀಪವಿರುವಂತೆ ಅನಿಸುತ್ತದೆಯೇ?

ಶಿಕ್ಷಣ ಕೌಶಲ್ಯವನ್ನು ನೀಡುವುದು ಅಥವಾ ಸಾಕ್ಷರತೆಯನ್ನು ಒದಗಿಸುವ ಬಗ್ಗೆ ಮಾತ್ರವಲ್ಲ, ಈ ಮೇಲಿನ ಗುರಿಯನ್ನು ಸಾಧಿಸಲು ಸಹಾಯಕವಾಗಿರುವ ಮಾನವನ ಶಾಶ್ವತ ಜ್ಞಾನಾನ್ವೇಷಣೆಯಲ್ಲೂ, ಶಿಕ್ಷಕರು ಪ್ರಮುಖ ಪಾತ್ರವನ್ನು ಹೊಂದಿದ್ದಾರೆ. ಶೈಕ್ಷಣಿಕ ಮತ್ತು ವೃತ್ತಿಪರ ಮಾನದಂಡಗಳು, ಶೈಕ್ಷಣಿಕ ಗುರಿಗಳು ಸಾಧಿಸಲು ಅವಶ್ಯಕವಾದ ಕಲಿಕೆಯ ಸ್ಥಿತಿಗತಿಗಳ ಒಂದು ನಿರ್ಣಾಯಕ ಭಾಗವಾಗಿವೆ ಎಂಬುವುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ.

ಶೈಕ್ಷಣಿಕ ತಯಾರಿಕೆ, ವಿಷಯ ಜ್ಞಾನದ ಮಟ್ಟ ಮತ್ತು ಗುಣಮಟ್ಟ, ಶಿಕ್ಷಕರ ಶಿಕ್ಷಣ–ಶಾಸ್ತ್ರ–ಕೌಶಲಗಳ ಭಂಡಾರವು, ವೃತ್ತಿಗೆ ಬದ್ಧತೆಯ ಮಟ್ಟ, ಸಮಕಾಲೀನ ಸಮಸ್ಯೆಗಳ ಹಾಗೂ ತೊಂದರೆಗಳ ಪ್ರತಿ ಸಂವೇದನೆ ಮತ್ತು ಕಲಿಯುವವರ ಪ್ರತಿ ಸಂವೇದನೆ, ತರಗತಿ ಕೊಠಡಿಗಳಲ್ಲಿ ಪಠ್ಯಕ್ರಮದ ವ್ಯವಹಾರದ ಗುಣಮಟ್ಟವನ್ನು ಮತ್ತು ಇದರಿಂದಾಗಿ ವಿದ್ಯಾರ್ಥಿ ಕಲಿಕೆಯನ್ನು ಪರಿಣಾಮಕಾರಿಯಾಗಿ ಪ್ರಭಾವಿಸುತ್ತದೆ.[1] ಸಮಾಜದಲ್ಲಿ ನಡೆಯುತ್ತಿರುವ ವಿಶಾಲವಾದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬದಲಾವಣೆಗಳಿಗೆ ಪ್ರತಿಕ್ರಿಯೆಯಾಗಿ, ಶಿಕ್ಷಣ ಸಂಸ್ಥೆಗಳ ಅಪೇಕ್ಷೆಗಳು ಶಿಕ್ಷಕರಿಂದ ಕಾಲಕಾಲಕ್ಕೆ ಬದಲಾಗುತ್ತವೆ.

ಶಿಕ್ಷಕರು ಮಕ್ಕಳಲ್ಲಿ ಜ್ಞಾನ ಮತ್ತು ಅರ್ಥವನ್ನು ನಿರ್ಮಿಸಲು ಸಹಾಯ ಮಾಡುವ ರೀತಿಯಲ್ಲಿ ಮಕ್ಕಳ ಕಲಿಕೆಯನ್ನು ಅನುಕೂಲಿಸಬೇಕೆಂದು ಎನ್.ಸಿ.ಎಫ್.ನಲ್ಲಿ ಹೇಳಲಾಗಿದೆ. ಈ ಪ್ರಕ್ರಿಯೆಯಲ್ಲಿರುವ ಶಿಕ್ಷಕರು ಜ್ಞಾನದ ಸಹ–ರಚನಾಕಾರರಾಗಿರುತ್ತಾರೆ.[2] ಇಂತಹ ಬೃಹತ್ತಾದ ನಿರೀಕ್ಷೆಗಳ ಎದುರು, ಒಬ್ಬ ಶಿಕ್ಷಕ ತನ್ನನ್ನೇ ತಾನು ಹೇಗೆ ವೀಕ್ಷಿಸುತ್ತಾನೆ? ತರಗತಿ ಮತ್ತು ಸಮಾಜದಲ್ಲಿ ಅವರು ತಮ್ಮ ಪಾತ್ರವನ್ನು ಹೇಗೆ ನೋಡುತ್ತಾರೆ? ಅವರು ತಮ್ಮ ಉದ್ದೇಶವನ್ನು ನೋಡಬಲ್ಲರೆ? ಮತ್ತು ಅಂತಿಮವಾಗಿ ಅವರ ಅಭಿಪ್ರಾಯಗಳು ಶಾಲೆಗಳ ಹಾಗೂ ಸಮಾಜದ ನಿರೀಕ್ಷೆಯ ಪ್ರಕಾರ ಬದಲಾಗುತ್ತವೆಯೇ?

ಈ ಸನ್ನಿವೇಶದಲ್ಲಿ ಮತ್ತು ಸಮಗ್ರ ಪ್ರಸ್ತಾಪಗಳ ಬೆಳಕಿನಲ್ಲಿ ಕೆಲವು ಮೂಲಭೂತ ಪ್ರಶ್ನೆಗಳನ್ನು ಶಿಕ್ಷಕ–ಜ್ಞಾನ ಮತ್ತು ಶಿಕ್ಷಕರ ಗುರುತಿನ ಬಗ್ಗೆ ಅನ್ವೇಷಿಸಲು ಈ ಲೇಖನ ಪ್ರಯತ್ನಿಸುತ್ತದೆ.[3]

## ಶಿಕ್ಷಕರ ಗುರುತು – ಪ್ರಭಾವ ಬೀರುವ ಅಂಶಗಳು

ಪ್ರಸ್ತುತ ಶಿಕ್ಷಕನ ಗುಣಮಟ್ಟ ಹಲವಾರು ಅಂಶಗಳಿಂದ ಪ್ರಭಾವಿಸಲ್ಪಟ್ಟಿದೆ. ಶಿಕ್ಷಕರ ದರ್ಜೆ, ಸಂಭಾವನೆ, ಕೆಲಸದ ಪರಿಸ್ಥಿತಿ ಮತ್ತು ಅವರ ಶೈಕ್ಷಣಿಕ ಹಾಗೂ ವೃತ್ತಿಪರ ಶಿಕ್ಷಣ, ಜನಾಂಗೀಯ ಸಾಂಸ್ಕೃತಿಕ ಗುರುತಿಸುವಿಕೆ, ಸಾಮಾಜಿಕ ಆರ್ಥಿಕ ಸ್ಥಿತಿಗಳ ಗುರುತಿಸುವಿಕೆ, ಭೌಗೋಳಿಕ ಗುರುತಿಸುವಿಕೆ (ಇದು ನಗರ ಅಥವಾ ಗ್ರಾಮೀಣ ಭಾಗಗಳ ವ್ಯತ್ಯಾಸಗಳಿಗೆ ಸಂಬಂಧಿಸಿರಬಹುದು), ಧಾರ್ಮಿಕ / ಆಧ್ಯಾತ್ಮಿಕ ಗುರುತಿನ ಮೂಲಕ ಅವರ ಗುರುತನ್ನು ಪ್ರಭಾವಿಸಲಾಗಿದೆ. ಚೀಕ್ ಪ್ರಸ್ತಾಪಿಸಿದ ಮಾದರಿಯ ಆಧಾರದ ಮೇಲೆ, ವೈಯಕ್ತಿಕ, ಸಾಮಾಜಿಕ, ಸಂಬಂಧಾತ್ಮಕ ಮತ್ತು ಸಾಮೂಹಿಕ

ನಾಲ್ಕು ವಿಭಿನ್ನ ರೀತಿಯ ಗುರುತಿನ ದೃಷ್ಟಿಕೋನಗಳಿವೆ. ಹಾಗಾಗಿ ಶಿಕ್ಷಕರು ತಮ್ಮ ಗುರುತನ್ನು ತಿಳಿದಿದ್ದರೂ ಈ ವಿವಿಧ ಪ್ರಭಾವಗಳ ಅಡಿಯಲ್ಲಿ ಬೋಧನೆ ಅಥವಾ ಕಲಿಕೆ ಫಲಿತಾಂಶಗಳ ಮೇಲೆ ಪರಿಣಾಮ ಬೀರುತ್ತದೆ ಹಾಗೂ ಅವರ ಕಾರ್ಯಕ್ಷಮತೆಯ ಮೇಲೆ ಪರಿಣಾಮ ಬೀರುತ್ತದೆ.[4]

ಈ ಲೇಖನದಲ್ಲಿ, 'ಗುರುತು' ಬಗ್ಗೆ ಚರ್ಚಿಸಿದಾಗ, ಇದು ಆಸೆಗಳು, ಆಲೋಚನೆಗಳು ಮತ್ತು ಕ್ರಿಯೆಗಳ ಸಂಯೋಜನೆಯಾಗಿರುವ ವೈಯಕ್ತಿಕ 'ಸ್ವ-ಉಲ್ಲೇಖ' ಹಾಗೂ ಅವರು ಆಡುವ ಪಾತ್ರವನ್ನು ಪ್ರತಿಬಿಂಬಿಸುತ್ತದೆ.[5] ರೋಸ್ ವ್ಯಾಖ್ಯಾನಿಸಿದಂತೆ, ಶಿಕ್ಷಕನು ಒಂದು "ಸುಸಂಬದ್ಧವಾದ, ಅನಿರ್ಬಂಧಿತ, ವ್ಯಕ್ತಿಗತ, ಉದ್ದೇಶಪೂರ್ವಕ, ಚಿಂತನೆ, ಕ್ರಿಯೆ ಮತ್ತು ನಂಬಿಕೆಗಳ ಸ್ಥಾನ ಪಡೆದಿದ್ದು ಸ್ಥಿರವಾದ ಗುರುತನ್ನು ಹೊಂದಲು ಸಾಧ್ಯವೆಂದು" ಭಾವಿಸಲಾಗಿದೆ (ಒಂದು 'ಶಿಕ್ಷಕರ ಗುರುತು'), ಇದು ತರಗತಿಗಳು ಮತ್ತು ಶಾಲೆಗಳಲ್ಲಿ ನಿರ್ದಿಷ್ಟ ಅನುಭವಗಳ ಭಂಡಾರವಾಗಿ ಕಾರ್ಯನಿರ್ವಹಿಸುತ್ತದೆ ಹಾಗೂ ಆಲೋಚನೆಗಳು, ವರ್ತನೆಗಳು, ಭಾವನೆಗಳು, ನಂಬಿಕೆಗಳು ಮತ್ತು ಮೌಲ್ಯಗಳ ಹೊಂದಿ ಸ್ಥಾನವಾಗಿರುತ್ತದೆ.[6]

ವೈಯಕ್ತಿಕ ತತ್ತ್ವಶಾಸ್ತ್ರ ಮತ್ತು ಪ್ರಚಲಿತ ಅಭ್ಯಾಸಗಳನ್ನು ಪ್ರಶ್ನಿಸಲು ಅವಕಾಶವಿಲ್ಲದೆ, ಶಿಕ್ಷಕರು ಕೇವಲ ಇತರರ ನಡವಳಿಕೆ ಮತ್ತು ನಂಬಿಕೆಗಳನ್ನು ದೃಢೀಕರಿಸುತ್ತಾರೆ. ಇದರ ಸಂಭವನೀಯ ಫಲಿತಾಂಶವು ಪ್ರಸ್ತುತ ಸಂದರ್ಭಗಳಲ್ಲಿ ಹೇಗೆ 'ಹೊಂದಿಕೊಳ್ಳಬೇಕು' ಎಂದು ತಿಳಿದಿರುವ ಶಿಕ್ಷಕ; ವ್ಯತ್ಯಾಸವನ್ನು ಬೀರುವಂತಹ ನಿರ್ಧಾರಗಳನ್ನು ಕೈಗೊಳ್ಳಲು ಕೌಶಲ್ಯ ಮತ್ತು ವಿಶ್ವಾಸ ಹೊಂದಿರುವ ಶಿಕ್ಷಕನಲ್ಲ.[7] ಪ್ರತಿಫಲನ, ಒಬ್ಬರ ನಂಬಿಕೆಗಳು ಮತ್ತು ಊಹೆಗಳನ್ನು ನಿರಂತರವಾಗಿ ಪ್ರಶ್ನಿಸಲು, ಸ್ವ-ಸುಧಾರಣೆಗಾಗಿ ಅವಕಾಶಗಳನ್ನು ಕಂಡುಹಿಡಿಯಲು ಒಂದು ಪರಿಣಾಮಕಾರಿ ಮಾರ್ಗವಾಗಿದೆ. ಪ್ರತಿಫಲನ ಅಭ್ಯಾಸ ಪ್ರಕ್ರಿಯೆ ಶಿಕ್ಷಕರನ್ನು, ಮಾನವನ ಸ್ವಭಾವ, ಮಾನವ ಕ್ಷಮತೆ, ಮತ್ತು ಮಾನವ ಕಲಿಕೆಗೆ ಸಂಬಂಧಿಸಿದ ಆಳವಾದ-ಬೇರೂರಿದ ವೈಯಕ್ತಿಕ ವರ್ತನೆಗಳನ್ನು ಎದುರಿಸುವ ಕೆಲಸಕ್ಕೆ ಕರೆ ನೀಡುತ್ತದೆ. ಪ್ರತಿಫಲಿತ ಅಭ್ಯರ್ಥಿಗಳು ಊಹೆಗಳನ್ನು ಮತ್ತು ಪ್ರಚಲಿತ ವಿಧಾನಗಳನ್ನು ಪ್ರಶ್ನಿಸುತ್ತಾರೆ.[8]

'ಸ್ವ-ಪ್ರತಿಫಲನ' ಬಹಳ ಮುಖ್ಯ. ಏಕೆಂದರೆ ಶಿಕ್ಷಕರು ಪ್ರಜ್ಞಾಪೂರ್ವಕ ಜೀವಿಗಳು, ಅವರು ತಮ್ಮನ್ನು ಮತ್ತು ತಮ್ಮ ವಿದ್ಯಾರ್ಥಿಗಳನ್ನು ಸಂಪೂರ್ಣ ಮಾನವರಂತೆ ವೀಕ್ಷಿಸುವ ಮತ್ತು ಅರ್ಥಮಾಡಿಕೊಳ್ಳುವ ಪ್ರಜ್ಞಾಪೂರ್ವಕ ಶಿಕ್ಷಕರಾಗಬೇಕು.[9] ಈ 'ಸ್ವ-ಪ್ರತಿಫಲನ' ಚಟುವಟಿಕೆಯು (ತಮ್ಮ ಆಲೋಚನೆಯ ಪ್ರೇಕ್ಷಕರಾಗುವುದು) ಶಿಕ್ಷಕರು ತಮ್ಮ ಕೆಲಸದಲ್ಲಿ ಸ್ಥಿರವಾಗಿರಲು ನೆರವಾಗಿ, ಅವರ ನುಡಿ ಮತ್ತು ನಡತೆಯಲ್ಲಿ ವ್ಯತಿರಿಕ್ತತೆ ಇಲ್ಲದೆ, ನೈತಿಕ ಆಲೋಚನೆಗಳು ಮತ್ತು ಕ್ರಿಯೆಗಳಿಗೆ ಕಾರಣವಾಗುತ್ತದೆ.

ಶಿಕ್ಷಕರಲ್ಲಿ ಸ್ವಯಂ-ಅರಿವಿದ್ದರೆ, ಅವರು ವಿದ್ಯಾರ್ಥಿಗಳಿಗೆ ಅಧಿಕಾರವನ್ನು ನೀಡಲು ಸಾಧ್ಯವಾಗುತ್ತದೆ ಹಾಗೂ ಅದರಿಂದ ಕಲಿಕೆಯ ವರ್ಧನೆ ಹೆಚ್ಚಾಗುತ್ತದೆ. ತಮ್ಮ ನಂಬಿಕೆಗಳು ಮತ್ತು ಪಕ್ಷಪಾತಗಳನ್ನು ಅರಿತುಕೊಳ್ಳಲು ಸ್ವಯಂ-ತಿಳುವಳಿಕೆಯ ಸಂಪೂರ್ಣ ಜ್ಞಾನ ಅಗತ್ಯ. ನಮ್ಮ ಸ್ವಂತ ಪ್ರಜ್ಞೆ, ನಮ್ಮ ಕ್ಷಮತೆಗಳು, ನಮ್ಮ

ವೈಫಲ್ಯಗಳು, ನಮ್ಮ ಆಸೆಗಳು, ಆಲೋಚನೆಗಳು ಮತ್ತು ನಿರೀಕ್ಷೆಗಳನ್ನು ನಾವು ಅರ್ಥಮಾಡಿಕೊಂಡು ಮೆಚ್ಚಿದರೆ, ಇವುಗಳನ್ನು ನಾವು ಇತರರಲ್ಲಿ, ವಿಶೇಷವಾಗಿ ನಮ್ಮ ವಿದ್ಯಾರ್ಥಿಗಳಲ್ಲಿ ಮತ್ತಷ್ಟು ಉತ್ತಮವಾಗಿ ಅರಿತುಕೊಂಡು ಪ್ರಶಂಸಿಸುತ್ತೇವೆ. ಇದರ ಪರಿಣಾಮವಾಗಿ, ನಾವು ನಮ್ಮನ್ನು ಹೇಗೆ ಗ್ರಹಿಸುತ್ತೇವೆ, ನಮ್ಮ ಗುರುತನ್ನು ಹೇಗೆ ವೀಕ್ಷಿಸುತ್ತೇವೆ ಎಂಬುವುದು, ಪ್ರತಿಯೊಂದು ಬಾಹ್ಯ ಸೂಚನೆ ಅಥವಾ ಒತ್ತಡದೊಂದಿಗೆ ಬದಲಾಯಿಸುವ ಬದಲು, ಒಂದು ಹೆಚ್ಚು ದೃಢವಾದ ಸಾರ್ವತ್ರಿಕ ಗುರುತಾಗಿರುತ್ತದೆ. ಒಬ್ಬ ಶಿಕ್ಷಕನು ಸ್ವಯಂ ಮತ್ತು ಇತರರನ್ನು ಅರಿತು, ತಮ್ಮ ನಂಬಿಕೆಗಳು, ಊಹೆಗಳು, ಭಾವನೆಗಳು ಮತ್ತು ಆಕಾಂಕ್ಷೆಗಳನ್ನು ಅರ್ಥಮಾಡಿಕೊಳ್ಳಬೇಕು; ಸ್ವ-ವಿಶ್ಲೇಷಣೆ, ಸ್ವ-ಮೌಲ್ಯಮಾಪನ, ಹೊಂದಾಣಿಕೆಯ ಸಾಮರ್ಥ್ಯ, ನಮ್ಯತೆ, ಸೃಜನಶೀಲತೆ ಮತ್ತು ನಾವೀನ್ಯತೆಗೆ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು ಎಂದು ಎನ್.ಸಿ.ಎಫ್.ಟಿ.ಇ. 2009 ಬಯಸುತ್ತದೆ.[10]

## ಚೇತನ-ವಿಕಾಸ ಮತ್ತು ಸಾರ್ವತ್ರಿಕ ಶಿಕ್ಷಕರ-ಗುರುತು

ಹೀಗಾಗಿ, ನಾವು ಯಾವುದರ ಬಗ್ಗೆ ಪ್ರತಿಫಲಿಸಬೇಕು, ಚಿಂತಿಸಬೇಕು ಎಂಬ ಮುಖ್ಯ ಪ್ರಶ್ನೆ ಉದ್ಭವಿಸುತ್ತದೆ. ಮಾನವನ ವರ್ತನೆಯನ್ನು ಒಂದು ಯಾಂತ್ರಿಕ ಮಾದರಿಯ ಮೂಲಕ ವಿವರಿಸಲಾಗುವುದಿಲ್ಲ ಅಥವಾ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ನಮ್ಮಲ್ಲಿ ಸಮಾನತೆಯ ಬಿಂದುವೇನು? ಭಿನ್ನತೆಯ ಬಿಂದುವೇನು? ನಮ್ಮ ಮೇಲಿರುವ ವಿವಿಧ ಪ್ರಭಾವಗಳು ಹಾಗೂ ನಾವು ಆಡುವ ವಿವಿಧ ಪಾತ್ರಗಳು ಯಾವುವು? ನಾವು 'ಸ್ವ' ಅನ್ನು ಹೇಗೆ ಗ್ರಹಿಸಿಕೊಳ್ಳುತ್ತೇವೆ? ನಾವು ಮನುಷ್ಯನ ಚೈತನ್ಯದ ಅಂಶವನ್ನು ಅಧ್ಯಯನ ಮಾಡಿದರೆ ಮಾತ್ರ ನಾವು ಈ ಪ್ರಶ್ನೆಗಳನ್ನು ಉತ್ತರಿಸಬಹುದು. ಈ ಚೈತನ್ಯದ ಅಂಶವೇ ನಮ್ಮ ನಿರ್ಣಯಗಳು ಮತ್ತು ಕಾರ್ಯಗಳಿಗೆ ಕಾರಣವಾಗಿರುತ್ತದೆ. ಮನುಷ್ಯನ ಚೈತನ್ಯದ ಪಾತ್ರ ಮತ್ತು ಉದ್ದೇಶದ ಅಧ್ಯಯನ ಮಾಡುವುದರಿಂದ, ಅಸ್ತಿತ್ವದಲ್ಲಿ ಸ್ವ ಹಾಗೂ ನಮ್ಮ ಸುತ್ತಲಿರುವ ಪ್ರಪಂಚವನ್ನು ವೀಕ್ಷಿಸುವ ಸಾಮರ್ಥ್ಯವನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಮನುಷ್ಯನ ಪೂರ್ವ ಕಲ್ಪನೆಗಳು, ವೈಯಕ್ತಿಕ ಪೂರ್ವಗ್ರಹಗಳು ಮತ್ತು ಸಾಂಸ್ಕೃತಿಕ ಮತ್ತು ಸಾಮಾಜಿಕ-ಆರ್ಥಿಕ ಪ್ರಭಾವಗಳಿಂದ ಸ್ವತಂತ್ರವಾದ ದೃಷ್ಟಿಯನ್ನು ನೀಡುತ್ತದೆ. ಮನುಷ್ಯನ ಜಾಗೃತ ಅಂಶವನ್ನು ಅರಿತುಕೊಳ್ಳುವುದು ಕೇವಲ ಸ್ವ-ಪರಿಕಲ್ಪನೆಯನ್ನು ಅರಿತುಕೊಳ್ಳುವುದಲ್ಲ[11] ಅಥವಾ ವರ್ಗೀಯ-ಸ್ವ ಅನ್ನು[12] ಅರಿತುಕೊಳ್ಳುವುದಲ್ಲ, ಅಸ್ತಿತ್ವದಲ್ಲಿ ಪ್ರಜ್ಞೆಯ ಸ್ವರೂಪ, ಅದರ ರಚನೆ, ಅದರ ಕಾರ್ಯಚಟುವಟಿಕೆ ಮತ್ತು ಅಂತಿಮವಾಗಿ ಅದರ ಉದ್ದೇಶವನ್ನು ಅರಿತುಕೊಳ್ಳುವುದು.[13] ಜಾಗೃತತೆಯ ಅಥವಾ ಪ್ರಜ್ಞೆಯ ಸ್ತರದ (ಚೇತನ) ಯಾವುದೇ ಅಧ್ಯಯನ ಮಾನವ ದೇಹದ (ವೈದ್ಯಕೀಯ ವಿಜ್ಞಾನ) ಅಧ್ಯಯನದಂತೆ, ಪ್ರಕೃತಿಯಲ್ಲಿ ಸಾರ್ವತ್ರಿಕವಾಗಿರಬೇಕು.

ಮಾನವನ ಚೈತನ್ಯದ ಅಂಶವನ್ನು ತನ್ನ ಪರಿಸರದ ಪ್ರತ್ಯೇಕತೆಯಲ್ಲಿ ಅಧ್ಯಯನ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಮಾನವ ಪ್ರಜ್ಞೆಯನ್ನು ಅರ್ಥಮಾಡಿಕೊಳ್ಳಲು

ನಾವು ಅದರ ಅಸ್ತಿತ್ವದ ಉದ್ದೇಶದೊಂದಿಗೆ, ನಮ್ಮ ಸುತ್ತ ಇರುವ ಎಲ್ಲವನ್ನೂ ಅಧ್ಯಯನ ಮಾಡುವುದರೊಂದಿಗೆ, ಅಸ್ತಿತ್ವದಲ್ಲಿ ವಾಸ್ತವಿಕವಾಗಿ ಹೇಗಿದೆಯೋ ಹಾಗೆಯೇ ನಾವು ಅಧ್ಯಯನ ಮಾಡಬೇಕು. 'ಮಾನವನಾಗಿರುವುದೆಂದರೇನು?', 'ನನ್ನ ಉದ್ದೇಶವೇನು?', 'ನಾನು ಮಾನವೀಯ ವರ್ತನೆಯೊಂದಿಗೆ ಹೇಗೆ ಬದುಕಬೇಕು?' ಮತ್ತು 'ನನ್ನ ಸುತ್ತ ಇರುವ ಎಲ್ಲದರೊಂದಿಗಿನ ನನ್ನ ಸಂಬಂಧವೇನು?' ಎಂಬ ಜ್ಞಾನವನ್ನು ಹೊಂದಿರುವ ಶಿಕ್ಷಕನು, ಉನ್ನತ ಮಟ್ಟದ ಪ್ರಜ್ಞೆ, ಮಾನವೀಯ ಪ್ರಜ್ಞೆಯಿಂದ ಕಾರ್ಯನಿರ್ವಹಿಸುವ ಶಿಕ್ಷಕನಾಗುತ್ತಾನೆ. ಈ ಉನ್ನತ ಮಟ್ಟದ ಪ್ರಜ್ಞೆಯಿಂದ ಕಾರ್ಯಶೀಲರಾಗುವ ಅಥವಾ ವರ್ತಿಸುವ ಶಿಕ್ಷಕರಿಗೆ, ಅಲುಗಾಡಿಸಲಾಗದಂತಹ ಗುರುತನ್ನು ರೂಪಿಸಲು ಅವಕಾಶ ನೀಡುತ್ತದೆ. ಬಾಹ್ಯ ಪ್ರಭಾವಗಳಿಂದ ನಿರಾತಂಕವಾದಂತಹ ಗುರುತು, ಅವರು ತರಗತಿಯೊಳಗೆ ಮತ್ತು ಹೊರಗಡೆ ಎದುರಿಸುವ ಪ್ರತಿಯೊಂದು ಸಂಭಾವ್ಯ ಪರಿಸ್ಥಿತಿಗೆ ಹೊಂದಿಕೊಳ್ಳುವಲ್ಲಿ ಸಹಾಯ ಮಾಡುವಂತಹ ಸಾರ್ವತ್ರಿಕ ಮಾನವೀಯ ಗುರುತಾಗಿರುತ್ತದೆ.


ಪ್ರತಿಯೊಬ್ಬ ಮಾನವ, ನಾವು 'ಸ್ವ' ಎಂದು ಕರೆಯುವ ಘಟಕದ ಮತ್ತು ಶರೀರದ ರಚನೆಯಾಗಿದ್ದು, ಪ್ರತಿಯೊಬ್ಬ ಮಾನವ ತನ್ನ 'ಮಮಕಾರ'ವನ್ನು(ನನ್ನದೆಂಬ ಭಾವನೆ) ಸಾಕಾರಗೊಳಿಸಿ, ತನ್ನ ಮನಸ್ವಸ್ಥತೆಯ ಆಶಾವಾದಿಯಾಗಿರುತ್ತಾನೆ'[14] ಅಂದರೆ ತನ್ನ ಕಲ್ಪನೆಯನ್ನು ಕ್ರಮವಾಗಿ ತರಲು ಬಯಸುತ್ತಾನೆ ಮತ್ತು ಆರೋಗ್ಯಕರ ಮನಸ್ಥಿತಿ ಅಥವಾ ಮನಸ್ಸನ್ನು (ಮಾನವ ಪ್ರಜ್ಞೆ) ನಿರಂತರವಾಗಿ ಬಯಸುತ್ತಾನೆ. ಅವನ ಅಥವಾ ಅವಳ ಸಾಮಾನ್ಯ ಇರುವಿಕೆಯ ಮೂಲಕ ಮಾನವ ಎಲ್ಲಾ ಇತರ ಮಾನವರ ಮತ್ತು ಅಸ್ತಿತ್ವದ ಘಟಕಗಳಿಗೆ ಸಂಬಂಧಿಸಿಕೊಳ್ಳುತ್ತೇನೆ– ಹೀಗಿರುವುದರಿಂದಲೇ ನಾವು ಎಲ್ಲದರ ಬಗ್ಗೆ ಯೋಚಿಸುತ್ತೇವೆ, ಅರಿತುಕೊಳ್ಳಲು ಪ್ರಯತ್ನಿಸುತ್ತೇವೆ. ಈ ರೀತಿ ಸಂಬಂಧವಿರುವುದರಿಂದ, ಒಬ್ಬ ಮಾನವ 'ಉನ್ನತ ಪ್ರಜ್ಞೆಯ' ಸ್ಥಿತಿ (ಚೇತನ ವಿಕಾಸವಾದ ಸ್ಥಿತಿ) ತಲುಪಿ ಅವನು / ಅವಳು ಸಹಜವಾಗಿ ತಮ್ಮ ಜೊತೆಗಾರರನ್ನು ಈ ಸ್ಥಿತಿಯನ್ನು ಸಾಧಿಸಲು ಸಹಕರಿಸುವುದಕ್ಕಾಗಿ ಕೆಲಸ ಮಾಡುತ್ತಾರೆ.[15] ಇದನ್ನು ಇಂದಿಗೂ ಸಹ ಕಾಣಬಹುದು – ನಾವು, ಉತ್ತಮ ಮತ್ತು ಉಪಯುಕ್ತ ಎಂದು ಭಾವಿಸುವುದನ್ನು, ನಮ್ಮ ಸಹವರ್ತಿ ಮಾನವರೊಂದಿಗೆ ಪರಸ್ಪರ ಹಂಚಿಕೊಳ್ಳಲು ಸಹಜ ಪ್ರವೃತ್ತಿಯನ್ನು ಹೊಂದಿದ್ದೇವೆ. ಈ ಒಂದು ಸತ್ಯವನ್ನು ಅರ್ಥಮಾಡಿ ಕೊಳ್ಳುವುದರಿಂದ, ಒಂದು ಪಡಿಯಚ್ಚು ಶಿಕ್ಷಕ–ವಿದ್ಯಾರ್ಥಿ ಸಂಬಂಧವನ್ನು ನಿರ್ಮಿಸಲು ಅಥವಾ ರಚಿಸಲು ಪ್ರಯತ್ನಿಸುವುದಕ್ಕೆ ವಿರುದ್ಧವಾಗಿ ಶಿಕ್ಷಕರು ತಮ್ಮ ವಿದ್ಯಾರ್ಥಿಗಳೊಂದಿಗೆ ತಮ್ಮ ಸಂಬಂಧವನ್ನು ಅಸ್ತಿತ್ವದಲ್ಲಿ ವಾಸ್ತವಿಕ ಸ್ವರೂಪದಲ್ಲಿ ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಶಿಕ್ಷಕರಾಗಿ ನಾವೆಲ್ಲರೂ ಈ ಸ್ಥಿತಿ ತಲುಪಿದಾಗ 'ಬೋಧನೆ' ಕೇವಲ ಒಂದು 'ವೃತ್ತಿ' ಎಂಬುವುದು ಕೊನೆಗೊಳ್ಳುತ್ತದೆ.[16]

ಅಸ್ತಿತ್ವದ ಮೂಲಭೂತ ಸತ್ಯಗಳು (ನಾವು ಯಾರು ಮತ್ತು ಹೇಗಿದ್ದೇವೆ, ನಾವು ಪ್ರಕೃತಿಯಲ್ಲಿರುವ ಎಲ್ಲರೊಂದಿಗೆ, ಇತರ ಮನುಷ್ಯರು ಅದರಲ್ಲೂ ನಿರ್ದಿಷ್ಟವಾಗಿ ವಿದ್ಯಾರ್ಥಿಗಳೊಂದಿಗೆ ನಮ್ಮ ಸಂಬಂಧವೇನು) ಪ್ರತಿಯೊಬ್ಬ ಶಿಕ್ಷಕನಲ್ಲೂ ಒಂದೇ

ಆಗಿರುತ್ತದೆ. ಇದು ಶಿಕ್ಷಣದ ಮೂಲಭೂತ ಗುರಿ ಮತ್ತು ಶಿಕ್ಷಣಶಾಸ್ತ್ರವನ್ನು ವ್ಯಾಖ್ಯಾನಿಸುತ್ತದೆ.[17] ಒಬ್ಬ ಶಿಕ್ಷಕ ಈ ತಿಳುವಳಿಕೆಯನ್ನು ಹೇಗೆ ಸಂವಹಿಸುತ್ತಾನೆ? ಅವನ ಅಭಿವ್ಯಕ್ತಿಯ ಕಲೆ ಮತ್ತು ಸೃಜನಶೀಲತೆ ಭಿನ್ನವಾಗಿದ್ದರೂ ಪ್ರತಿಯೊಬ್ಬ ಶಿಕ್ಷಕನು ಕೆಲವು ಅರ್ಥದಲ್ಲಿ 'ವಿಭಿನ್ನ'ನಾದರೂ ಎಲ್ಲರೂ ತಮ್ಮ ಪ್ರಜ್ಞೆಯ ಮೂಲಭೂತ ಮಟ್ಟದಲ್ಲಿ ಒಂದೇ ಆಗಿರುತ್ತಾರೆ. ನಮ್ಮೆಲ್ಲರ ಚೈತನ್ಯ ಘಟಕವು ಪರಿಪೂರ್ಣತೆ, ಮಾನವೀಯತೆ ಮತ್ತು ಸಂತೋಷವಾಗಿರುವ ಹಂತವನ್ನು ತಲುಪಲು ನಿರಂತರವಾಗಿ ಸುಧಾರಣೆ ಹೊಂದಲು ಬಯಸುತ್ತದೆ.[18] ನಾವು ಯಾವುದೇ ವ್ಯಕ್ತಿಯಿಂದ ಅಥವಾ ಸಮಾಜದಿಂದ ಊಹಿಸಲ್ಪಟ್ಟಿರುವ ನಿರ್ದಿಷ್ಟ ಮಾದರಿಯಂತೆ 'ಹೊಂದಿಕೊಳ್ಳಲು' ಪ್ರಯತ್ನಿಸುತ್ತಿರುವ, ಕೇವಲ ಪರಿಸ್ಥಿತಿಯ ಕಾರ್ಯಕರ್ತರಲ್ಲ. ಮಾನವ ಮತ್ತು ನಮ್ಮ ಉದ್ದೇಶಕ್ಕೆ ಸಂಬಂಧಿಸಿದಂತಹ ಸಾರ್ವತ್ರಿಕ ಸತ್ಯಗಳನ್ನು ಅರಿತುಕೊಳ್ಳುವುದರಿಂದ, ಪ್ರಾರಂಭಿಕವಾಗಿ, ನಾವು ಮಾನವೀಯತೆಯುಳ್ಳ ವ್ಯಕ್ತಿಗಳು ಎಂಬುವ ಗುರುತನ್ನು ಬಲಪಡಿಸಲು ಸಹಾಯ ಮಾಡುತ್ತದೆ. ನಂತರ, ಶಿಕ್ಷಕರಾಗಿ, ವೈದ್ಯರಾಗಿ ಅಥವಾ ಇಂಜಿನಿಯರಾಗಿ, ಸಮಾಜದಲ್ಲಿ ನಮ್ಮ ಪಾತ್ರವನ್ನು ಸ್ಪಷ್ಟಪಡಿಸುತ್ತದೆ. ಇಂತಹ ಸಾರ್ವತ್ರಿಕ ಶಿಕ್ಷಕರ ಗುರುತು ಅಪೇಕ್ಷಣೀಯವೇ ಅಥವಾ ತರಗತಿ, ಶಾಲಾ ನಿರೀಕ್ಷೆಗಳು, ಸಾಮಾಜಿಕ ಒತ್ತಡಗಳು ಮತ್ತು ಶಾಸನಬದ್ಧ ಮಾನದಂಡಗಳ ಪ್ರಭಾವದಿಂದ ಬದಲಾಗುತ್ತಿರುವ ಪರಿಸ್ಥಿತಿಯ ಪ್ರಕಾರ ಬದಲಾಗುವ ಗುರುತು ಅಪೇಕ್ಷಣೀಯವೇ?


ಮಾನವರಿಗೆ 'ಜ್ಞಾನ–ಶಿಕ್ಷಣ' ಅಗತ್ಯ, ಪ್ರಾಣಿಗಳಿಗೆ ಅಗತ್ಯವಿಲ್ಲ. 'ಕೌಶಲ್ಯ–ತರಬೇತಿ' ಪ್ರಾಣಿಗಳಿಗೆ ಸಾಕು, ಆದರೆ ಇದು ಮಾನವರ ಅಗತ್ಯಗಳನ್ನು ಪೂರೈಸುವುದಿಲ್ಲ. ಮಾನವ ಪ್ರಜ್ಞೆಯು ಕೇವಲ 'ಕೌಶಲ್ಯ ತರಬೇತಿ'ಯಲ್ಲಿ ತೃಪ್ತಿ ಹೊಂದುವುದಿಲ್ಲ, ಅದು ಕಲ್ಪನೆಯಲ್ಲಿ ಸ್ಪಷ್ಟತೆ ಮತ್ತು ಜ್ಞಾನವನ್ನು ಆಶಿಸುತ್ತದೆ. ಪ್ರಸ್ತುತ ಶಿಕ್ಷಕ–ಶಿಕ್ಷಣ ತರಬೇತಿಯನ್ನು ನಾವು, ಬಹು ಆಯಾಮದ, ಕ್ರಿಯಾತ್ಮಕ ಪ್ರಕ್ರಿಯೆಯಾಗಿ ವೀಕ್ಷಿಸುತ್ತೇವೆ, ಇದು ಸ್ಥಳೀಯ ಮತ್ತು ವಿಶ್ವವ್ಯಾಪಕ ತಿಳುವಳಿಕೆ, ನಾಯಕತ್ವ, ಮಾಹಿತಿ ತಾಂತ್ರಿಕ ಕೌಶಲ್ಯಗಳು, ವೃತ್ತಿಪರ ಜ್ಞಾನ ಮತ್ತು ಕೌಶಲ್ಯಗಳು ಮತ್ತು ಅಗತ್ಯ ವಿಷಯ ಜ್ಞಾನ ಮತ್ತು ವೃತ್ತಿಪರ ರೂಪಾಂತರಗಳನ್ನು ಪಡೆದುಕೊಳ್ಳುವಲ್ಲಿ ಸೇವಾ–ಪೂರ್ವ ಮತ್ತು ಸೇವಾ ನಿರತ ಶಿಕ್ಷಕರಿಗೆ ಸಹಾಯ ಮಾಡುತ್ತದೆ.[19] ಮೇಲಿನ ಎಲ್ಲಾ ವಿಷಯಗಳು ಶಿಕ್ಷಕರಿಗೆ ತಮ್ಮ ವೃತ್ತಿಯಲ್ಲಿ ನ್ಯಾಯ ದೊರಕಿಸಲು ಮುಖ್ಯವಾಗುತ್ತವೆ, ಆದರೆ ಅದು ಸಾಕಷ್ಟು ಅಥವಾ ಸಂಪೂರ್ಣ ಶಿಕ್ಷಣವಾಗದು. ಮಾನವನ ಶಿಕ್ಷಣದ ಪ್ರಾಥಮಿಕ ಉದ್ದೇಶವು ಪ್ರಜ್ಞೆಯ ಮಟ್ಟವನ್ನು ಮಾನವೀಯ ಮಟ್ಟಕ್ಕೆ ಹೆಚ್ಚಿಸುವುದು (ಚೇತನ ವಿಕಾಸ). ನಾವು ಕೌಶಲಗಳನ್ನು ಪಡೆದುಕೊಳ್ಳುವುದು ಅನುಕೂಲಕರವಾದ ಬದುಕನ್ನು ಬಾಳುವುದಕ್ಕಾಗಿ ನಮಗೆ ಮುಖ್ಯವಾಗುತ್ತದೆ, ಆದರೆ ಇದು ಎರಡನೇ ಅವಶ್ಯಕತೆಯಾಗಿದೆ. ಕೇವಲ ಮಾಹಿತಿ ಮತ್ತು ಕಲ್ಪನೆಗಳ ವರ್ಗಾವಣೆಯ ಮೂಲಕ ಚೇತನ–ವಿಕಾಸ ಸಾಧ್ಯವಿಲ್ಲ. ಮೌಲ್ಯ–ಶಿಕ್ಷಣ, ಅಂದರೆ ಅಸ್ತಿತ್ವದಲ್ಲಿರುವ ಪ್ರತಿಯೊಂದು ಘಟಕದ ಮೌಲ್ಯವನ್ನು ಅರಿತುಕೊಳ್ಳುವುದು, ಅದರ ಉದ್ದೇಶ ಮತ್ತು ಪಾತ್ರವನ್ನು ಅರಿತುಕೊಳ್ಳುವುದು ಚೇತನ ವಿಕಾಸಕ್ಕೆ ಅವಶ್ಯವಾಗಿದೆ. ಇದು, ಶಿಕ್ಷಕರು ಮತ್ತು

ವಿದ್ಯಾರ್ಥಿಗಳಿಗೂ, ವಾಸ್ತವವಾಗಿ ಎಲ್ಲ ಮಾನವರಿಗೂ ಪ್ರಸ್ತುತ. ಅಂತಹ ಮೌಲ್ಯ-ಶಿಕ್ಷಣವನ್ನು ಸ್ವಯಂ-ಪರೀಕ್ಷಣೆ ಪ್ರಕ್ರಿಯೆಯಿಂದ ಅನುಕೂಲಿಸಲಾಗುತ್ತದೆ. ಮಾನವನ ಬಗ್ಗೆ ಸಾರ್ವತ್ರಿಕ ಸತ್ಯಗಳ ಪರಿಶೋಧನೆಯಿಂದ ಆರಂಭವಾಗುತ್ತದೆ, ನಂತರ ಸತ್ಯದ ಮೇಲಿನ ನಂಬಿಕೆಯಾಗಿ ಅಂತಿಮವಾಗಿ, ಅದು ಕೇವಲ ಆಲೋಚನೆಗೆ ಹಾಗೂ ತರ್ಕಕ್ಕೆ ಸೀಮಿತವಲ್ಲದ,[20] ಉನ್ನತ ಪ್ರಜ್ಞೆಯ ಸ್ಥಿತಿಯ 'ಜ್ಞಾನ'ವಾಗುತ್ತದೆ.[21] 'ಶಿಕ್ಷಕ'ನ ಸಾರ್ವತ್ರಿಕ ವ್ಯಾಖ್ಯಾನವೆಂದರೆ ಮಾನವೀಯ ಚೇತನದ ಸ್ಥಿತಿಯಲ್ಲಿ ವಾಸಿಸುವ ಮತ್ತು ಇನ್ನೊಬ್ಬನನ್ನು (ವಿದ್ಯಾರ್ಥಿಯನ್ನು) ಈ ಪ್ರಜ್ಞೆಯ ಸ್ಥಿತಿ ತಲುಪಲು ಸಹಾಯ ಮಾಡುವ ಸಾಮರ್ಥ್ಯವನ್ನು ಹೊಂದಿರುವವನು. **ಇದೇ ಶಿಕ್ಷಕನ ಸಾರ್ವತ್ರಿಕ ಗುರುತು**.




## ತೀರ್ಮಾನಗಳು ಮತ್ತು ಸಲಹೆಗಳು

'ಮೇಯರ್' ಹೇಳುವಂತೆ, ಶಿಕ್ಷಕನಾಗಿ ಅವಳಿಗೆ / ಅವನಿಗೆ ಅಗತ್ಯವಿರುವ ಕಾರ್ಯಗಳನ್ನು ನಿರ್ವಹಿಸುವಲ್ಲಿ ಶಿಕ್ಷಕನು ಮಾಡುವ ಕೆಲಸಗಳನ್ನು ಒಂದು ಬೋಧನಾ ಪಾತ್ರವು ಸಂಯೋಜಿಸುತ್ತದೆ. ಆದರೆ ಶಿಕ್ಷಕರ ಗುರುತು ಒಂದು ಹೆಚ್ಚು ವೈಯಕ್ತಿಕ ವಿಷಯವಾಗಿದೆ ಮತ್ತು ಒಬ್ಬ ಶಿಕ್ಷಕನಾಗಿ ಹೇಗೆ ತನ್ನನ್ನು ತಾನೇ ಗುರುತಿಸಿಕೊಳ್ಳುತ್ತಾನೆ ಮತ್ತು ತನ್ನನ್ನು ಶಿಕ್ಷಕನಾಗಿ ಹೇಗೆ ಭಾವಿಸುತ್ತಾನೆ ಎಂದು ಸೂಚಿಸುತ್ತದೆ.[22] ಆದ್ದರಿಂದ, ಪೂರ್ವ-ಸೇವೆಯ ಶಿಕ್ಷಕ ಚಟುವಟಿಕೆಯನ್ನು ಸುಗಮಗೊಳಿಸುವುದರ ಮೂಲಕ ಶಿಕ್ಷಕ ಗುರುತನ್ನು ರಚಿಸುವುದನ್ನು ನಾವು ಪ್ರೋತ್ಸಾಹಿಸಬೇಕು, ಅದು ಅವರ ಅನುಭವಗಳು ಮತ್ತು ನಂಬಿಕೆಗಳನ್ನು ಸ್ಪಷ್ಟವಾಗಿ




ನಿರ್ಮಿಸಲು ಮತ್ತು ಸವಾಲು ಮಾಡುವ ಅಧಿಕಾರವನ್ನು ನೀಡುತ್ತದೆ.

ಶಿಕ್ಷಕ ಶಿಕ್ಷಣವು ಪ್ರಾಥಮಿಕವಾಗಿ ಶಿಕ್ಷಕರು, ತಮ್ಮನ್ನು ಮತ್ತು ತಮ್ಮ ಸುತ್ತಲಿರುವ ಜಗತ್ತನ್ನು ವಾಸ್ತವಿಕವಾಗಿ ವೀಕ್ಷಿಸುವ ಕ್ಷಮತೆಯನ್ನು ಮತ್ತು ಸಾಮರಸ್ಯದಿಂದ ಬದುಕುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವ ಅರ್ಹತೆಯನ್ನು ಹೊಂದುವುದಕ್ಕಾಗಿರುವುದು.[23]

ಸ್ವ-ಪ್ರಜ್ಞೆ, ಮಾನವ ಉದ್ದೇಶದ ಜ್ಞಾನ ಮತ್ತು ಮಾನವೀಯ ನಡವಳಿಕೆಯ ಜ್ಞಾನವು ಶಿಕ್ಷಕರಿಗೆ ತಮ್ಮ ಬಗ್ಗೆ ಮತ್ತು ತಮ್ಮ ಉದ್ದೇಶದ ಬಗ್ಗೆ ಈ ನೈಜ ದೃಷ್ಟಿಕೋನವನ್ನು ಹೊಂದಲು ಅಧಿಕಾರ ನೀಡುತ್ತದೆ, ಚೇತನ ವಿಕಾಸಕ್ಕೆ ಪ್ರಚೋದಿಸುತ್ತದೆ ಮತ್ತು ಇದರ ಆಧಾರದ ಮೇಲೆ ಒಂದು ಗುರುತನ್ನು ರೂಪಿಸುತ್ತದೆ. ಇಲ್ಲಿ ಜ್ಞಾನವೆಂದರೆ, ಪ್ರತಿಯೊಂದು ಘಟಕ 'ಯಾಕೆ' ಮತ್ತು 'ಹೇಗೆ' ಅಸ್ತಿತ್ವದಲ್ಲಿದೆ ಎಂಬುವುದರ ಅರಿವು, ಕಾಲ ಮತ್ತು ದೇಶದೊಂದಿಗೆ ಬದಲಾಗದೆ ಇರುವ ಜ್ಞಾನ; ಕ್ಲಿಂಚಿ ವ್ಯಾಖ್ಯಾನಿಸಲ್ಪಟ್ಟ ತಿಳಿವಳಿಕೆಗೆ ಸೀಮಿತವಾಗಿಲ್ಲ ಆದರೆ ಒಳಗೊಂಡಿರುತ್ತದೆ.[24]

ಈ ಮೊದಲು ಹೇಳಿದಂತೆ, ಮೌಲ್ಯ ಶಿಕ್ಷಣ – ಶಿಕ್ಷಕರಿಗೆ ಅಸ್ತಿತ್ವದಲ್ಲಿರುವ ಪ್ರತಿಯೊಂದರ ಮೌಲ್ಯ ಅಥವಾ ಉದ್ದೇಶವನ್ನು ಮತ್ತು ಅದರ ಪಾತ್ರವನ್ನು ಅರ್ಥಮಾಡಿಕೊಳ್ಳಲು ಮತ್ತು ಮೇಲಿನ ಜ್ಞಾನದ ಅಧಿಕಾರವನ್ನು ನೀಡುವ ಶಿಕ್ಷಣವು, ಪ್ರತಿಯೊಬ್ಬ ಮಾನವನ ಅಗತ್ಯತೆಯಾಗಿದೆ. ಸಫಲವಾದ ಮೌಲ್ಯ-ಶಿಕ್ಷಣವು, ಶಿಕ್ಷಕರಿಗೆ ಅಧಿಕಾರವನ್ನು ನೀಡುವ ಮತ್ತು ಪ್ರಜ್ಞಾಪೂರ್ವಕ ಬೆಳವಣಿಗೆಯನ್ನು ಉತ್ತೇಜಿಸುವಂತಹ ಅಸ್ತಿತ್ವ ಆಧಾರಿತ ಜ್ಞಾನದ ವ್ಯವಸ್ಥಿತ ಅಧ್ಯಯನ ಮತ್ತು ಅಭ್ಯಾಸವನ್ನು (ಸ್ವ-ಪರೀಕ್ಷಣೆ

ಮತ್ತು ಜೀವನೋಪಾಯವನ್ನು ಒಳಗೊಂಡಿರುತ್ತದೆ) ಸಕ್ರಿಯಗೊಳಿಸುತ್ತದೆ. ಇಂತಹ ಅಧ್ಯಯನವು –

- ಸಾರ್ವತ್ರಿಕ – ಪ್ರತಿಯೊಬ್ಬ ಮಾನವನು ಸಹಜವಾಗಿ ಹಾಗೂ ನೈಸರ್ಗಿಕವಾಗಿ ಸ್ವೀಕರಿಸುವಂತೆ ಮತ್ತು ವಾಸ್ತವಕ್ಕೆ ಸಹಜವಾಗಿರುವಂತೆ
- ಪರಿಶೀಲಿಸಬಹುದಾದ – ತರ್ಕಬದ್ಧವಾಗಿ, ಅಂತರ್ಬೋಧೆಯಿಂದ ಮತ್ತು ಪ್ರಾಯೋಗಿಕವಾಗಿ
- ಬಾಳಬಹುದಾದ – ವ್ಯಾವಹಾರಿಕ ಹಾಗೂ ಪ್ರಾಯೋಗಿಕ, ಕೇವಲ ಸೈದ್ಧಾಂತಿಕವಲ್ಲದೆ
- ಸಂಪೂರ್ಣ – ಮಾನವ ಜೀವನದ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ.[25]

ಇದು ಪರಿಣಾಮಕಾರಿಯಾದ ಶಿಕ್ಷಕ ತರಬೇತಿ ಕಾರ್ಯಕ್ರಮಗಳಿಗೆ ನೆರವಾಗಬಹುದು ಮತ್ತು ಶಿಕ್ಷಕರಿಗೆ ವೈಯಕ್ತಿಕ ಮತ್ತು ಶಾಸನಾತ್ಮಕ ಪಕ್ಷಪಾತದಿಂದ ಮುಕ್ತವಾಗಿರುವ ಸಾರ್ವತ್ರಿಕ ಗುರುತನ್ನು ನೀಡಬಹುದು.

## ಸಲಹೆಗಳು

ಮಾನವ ಶಿಕ್ಷಣ–ಮೌಲ್ಯಗಳನ್ನು ಖಾತರಿಪಡಿಸುವ ಜವಾಬ್ದಾರಿ ಪೋಷಕರು, ಶಿಕ್ಷಕರು ಮತ್ತು ಸಮಾಜದ್ದಾಗಿದೆ. ಆದರೆ ಅತ್ಯಂತ ಮುಖ್ಯ ಜವಾಬ್ದಾರಿ ಶಿಕ್ಷಕರದ್ದೇ ಆಗಿದೆ. ಆದ್ದರಿಂದ, ಶಿಕ್ಷಕರು ಮಾನವನ ಉದ್ದೇಶವನ್ನು ಮತ್ತು ಆಚರಣೆಯನ್ನು ಸಹ ಅಸ್ತಿತ್ವದಲ್ಲಿ ಅರ್ಥಮಾಡಿಕೊಂಡು ಅದಕ್ಕೆ ಅನುಗುಣವಾಗಿ ಬಾಳಲು ಪ್ರೋತ್ಸಾಹಿಸುವಂತಹ ಶಿಕ್ಷಣವನ್ನು ಒದಗಿಸುವುದು ಪ್ರಾಥಮಿಕ ಪ್ರಾಮುಖ್ಯತೆಯಾಗಿದೆ. ಶಿಕ್ಷಕರ ಪ್ರಜ್ಞೆಯ ವಿಕಾಸಕ್ಕಾಗಿ ಮೌಲ್ಯ ಶಿಕ್ಷಣದ ಅಗತ್ಯವಿದೆ.

ಇಂತಹ ಮೌಲ್ಯ ಶಿಕ್ಷಣವು ಪರಿಣಾಮಕಾರಿಯಾಗಬೇಕಾದರೆ ಕ್ರಮಬದ್ಧ ಅಧ್ಯಯನ ಮತ್ತು ಅನುಷ್ಠಾನವನ್ನು ಒಳಗೊಂಡಿರಬೇಕು. ಈ ಸಂದರ್ಭದಲ್ಲಿ ಶಿಕ್ಷಕರ ತರಬೇತಿಯ ಭಾಗವಾಗಿ ಕೆಲವು ಪ್ರಸ್ತಾವಿತ ಮಾದರಿಯನ್ನು ಇಲ್ಲಿ ನೀಡಲಾಗಿದೆ.

**ಮೊದಲ ಹಂತದಲ್ಲಿ –**

- ಸಹಅಸ್ತಿತ್ವವಾದದ (ಸಹಅಸ್ತಿತ್ವ ತತ್ವಶಾಸ್ತ್ರ) ಅವಶ್ಯಕತೆ ಮತ್ತು ವಿಷಯವನ್ನು ಚರ್ಚಿಸಲು ಎರಡು ಪೂರ್ವಭಾವಿ ಪರಿಚಯಾತ್ಮಕ ವಿಚಾರಗೋಷ್ಠಿಗಳು.
- ಇದಾದನಂತರ ಈ ತತ್ತ್ವಶಾಸ್ತ್ರದ ಆಧಾರದ ಮೇಲಿರುವ ಪಠ್ಯಪುಸ್ತಕದ ವಿವರವಾದ ಅಧ್ಯಯನ – ಏಳು ದಿನಗಳವರೆಗೆ.
- ಸಂಬಂಧಿತ ಆಡಿಯೋ ವಿಡಿಯೋ ಮೂಲಕ ಅಧ್ಯಯನ.

**ಎರಡನೆಯ ಹಂತದಲ್ಲಿ –**

- ತತ್ವಶಾಸ್ತ್ರದ ಮುಖ್ಯ ಪರಿಕಲ್ಪನೆಗಳನ್ನು ವಿವರವಾಗಿ ಅಧ್ಯಯನ ಮಾಡಲು ಏಳು ದಿನಗಳ ವಿಚಾರಗೋಷ್ಠಿ.

- 45 ದಿನಗಳ 6 ಸಾಹಿತ್ಯ ಪುಸ್ತಕಗಳ ಅಧ್ಯಯನದ ಅಧಿವೇಶನ.
- ಸಂಬಂಧಿತ ಆಡಿಯೋ ವಿಡಿಯೋ ಮೂಲಕ ಅಧ್ಯಯನ.

ಶಿಕ್ಷಕರು ಈ ತತ್ವಶಾಸ್ತ್ರವನ್ನು ವಿದ್ಯಾರ್ಥಿಗಳಿಗೆ ಒಂದು ಚುನಾಯಿತ (ಎಲೆಕ್ಟಿವ್) ವಿಷಯವಾಗಿ ಕಲಿಸಲು ಬಯಸಿದರೆ ಮೂರನೆಯ ಹಂತವನ್ನು ಪ್ರಸ್ತಾಪಿಸಬಹುದು –

- ಸಂಪೂರ್ಣ ಅಧ್ಯಯನ ಕಾರ್ಯಗೋಷ್ಠಿ + ಸಾರಾಂಶ ಗೋಷ್ಠಿ.
- ಎರಡು ಬಾರಿ ಲಭ್ಯವಿರುವ ಸಂಪೂರ್ಣ ಸಾಹಿತ್ಯದ ಸ್ವ–ಅಧ್ಯಯನ
- ಸಂಬಂಧಿತ ಆಡಿಯೋ ವಿಡಿಯೋ ಮೂಲಕ ಅಧ್ಯಯನ

ಈ ರೀತಿಯ ಮೌಲ್ಯ ಶಿಕ್ಷಣವನ್ನು ವಿದ್ಯಾರ್ಥಿಗಳಿಗೂ ಕಲಿಸಲು / ವರ್ಗಾಯಿಸಲು ಪ್ರತ್ಯೇಕ ವಿಶ್ವವಿದ್ಯಾನಿಲಯವು ಒಂದು ಕೋಶವನ್ನು (ಸಾರ್ವತ್ರಿಕ ಮಾನವೀಯ ಮೌಲ್ಯ / ಮೌಲ್ಯ ಶಿಕ್ಷಣ ಚೇತನಾ ವಿಕಾಸ) ಕೆಳಗಿನವರನ್ನು ಒಳಗೊಂಡು ನೇಮಿಸಬಹುದು.

- ಪೂರ್ಣ ಸಮಯ ಸಾರ್ವತ್ರಿಕ ಮಾನವೀಯ ಮೌಲ್ಯ–ಮೌಲ್ಯ ಶಿಕ್ಷಣ ಚೇತನಾ ವಿಕಾಸ ವಿಷಯ ತಜ್ಞರು.
- ಕೋಶ ಸಂಯೋಜಕ – ವಿಭಾಗಗಳು (ಅರೆಕಾಲಿಕ)
- ಸಾರ್ವತ್ರಿಕ ಮಾನವೀಯ ಮೌಲ್ಯ–ಮೌಲ್ಯ ಶಿಕ್ಷಣ ಚೇತನಾ ವಿಕಾಸ ಮಾರ್ಗ ದರ್ಶಕರು : ಅಧ್ಯಯನ ಗೋಷ್ಠಿಯನ್ನು ಪೂರ್ಣಗೊಳಿಸಿದ ಬೋಧಕವರ್ಗ.

ಶಿಕ್ಷಕರು ಈ ಮೌಲ್ಯ–ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಕಲಿಸಲು ಅಗತ್ಯವಿರುವ ಅನುಷ್ಠಾನ ಸಂಪನ್ಮೂಲಗಳು –

- ಪಠ್ಯಕ್ರಮ
- ಶಿಕ್ಷಕರ ಕೈಪಿಡಿ (ಉಪನ್ಯಾಸ ಯೋಜನೆ ಮತ್ತು ಅಭ್ಯಾಸದ ಅಧಿವೇಶನ)
- ಸಾರ್ವತ್ರಿಕ ಮಾನವೀಯ ಮೌಲ್ಯ / ಮೌಲ್ಯ ಶಿಕ್ಷಣ ಚೇತನಾ ವಿಕಾಸ ಪಠ್ಯ ಪುಸ್ತಕ
- ಪೋಸ್ಟರ್‌ಗಳು
- ಅಭ್ಯಾಸ ಅಧಿವೇಶನ, ಬೋಧನೆಗಳು ಮತ್ತು ವೀಡಿಯೋಗಳು ಸೇರಿದಂತೆ ಪ್ರಸ್ತುತಿಗಳು
- ವಿಚಾರ ಗೋಷ್ಠಿಗಳ ವೀಡಿಯೋ (ಉಪನ್ಯಾಸ ವಿಡಿಯೋಗಳು)
- ಎಂಟು ದಿನ ಶಿಕ್ಷಕರು ಪೂರ್ವಾಭಿಮುಖ ಕಾರ್ಯಕ್ರಮ
- ಪರೀಕ್ಷೆ ಮತ್ತು ಮೌಲ್ಯಮಾಪನ
- ಸಾಮಾಜಿಕ ಯೋಜನೆಗಳು ಮತ್ತು ಸಾಮಾಜಿಕ ತರಬೇತಿ

ಈ ರೀತಿಯ ಕಾರ್ಯಕ್ರಮದಿಂದ ಕೆಳಗೆ ದಾಖಲಾದ ಬದಲಾವಣೆಗಳು ಸಂಭವಿಸಿ ಮುಂದೆ ಒಂದು ಸಾರ್ವತ್ರಿಕ ಮಾನವೀಯ ಗುರುತಿಗೆ ಕಾರಣವಾಗಬಹುದು –

- ನಿರೀಕ್ಷಣೆ, ಪರೀಕ್ಷಣೆ ಹಾಗೂ ಸರ್ವೇಕ್ಷಣೆಯ ಆಧಾರದ ಮೇಲೆ ಅಸ್ತಿತ್ವದ ಬಗ್ಗೆ

ಮನುಷ್ಯನ ದೃಷ್ಟಿಕೋನ ಮತ್ತು ಕ್ರಮಬದ್ಧವಾದ ಅಧ್ಯಯನ. ವೀಕ್ಷಣೆ ಮತ್ತು ಕಾರಣದ ಮೇಲೆ ಆಧಾರಿತವಾಗಿದ್ದು, ತರ್ಕಬದ್ಧವಾಗಿರುವ ದೃಷ್ಟಿ.

- ○ ಬಾಹ್ಯ ಸೂಚಿತವಲ್ಲದೆ, ನೈಸರ್ಗಿಕವಾಗಿ ಹಾಗೂ ಅಸ್ತಿತ್ವ ಸಹಜವಾಗಿ ಸ್ವೀಕಾರವಾದ ಆಧಾರದ ಮೇಲೆ ನಿರ್ದೇಶಿತವಾದ ಸ್ವಯಂ-ಪರೀಕ್ಷಣೆ ಪ್ರಕ್ರಿಯೆಯ ಅಭ್ಯಾಸ.

- ● ಮರೆಯಾಗಿರುವ ಊಹೆಗಳ ಅನ್ವೇಷಣೆ ಹಾಗೂ ಉತ್ತರಗಳ ಪ್ರಸ್ತಾಪ: ಪರಿಹಾರ ಆಧಾರಿತ
  - ○ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು, ಅವರ ಜೀವನ, ಜೀವನದ ಉದ್ದೇಶ, ಸಂಬಂಧಗಳ, ಜೀವನಶೈಲಿ, ಸಮಾಜ ಮತ್ತು ಪರಿಸರ, ಅವರ ನಿಜವಾದ ಅರ್ಥವನ್ನು ಗುರುತಿಸುವುದರ ಬಗೆ ತಮ್ಮ ಪೂರ್ವ ನಿರೂಪಿತ ಕಲ್ಪನೆಗಳನ್ನು ಅಥವಾ ನಂಬಿಕೆಗಳನ್ನು ಮೌಲ್ಯಮಾಪಿ ಅನುಕೂಲಗೊಳಿಸುತ್ತದೆ.
- ● ವಿಮರ್ಶಾತ್ಮಕ ಚಿಂತನೆಯನ್ನು ಸಕ್ರಿಯಗೊಳಿಸಿ (ವಿವೇಕ) ಪ್ರತಿಫಲಿತ ಸಾಮರ್ಥ್ಯದ ಅಭಿವೃದ್ಧಿ: ಬುದ್ಧಿವಂತಿಕೆ
  - ○ ಶಿಕ್ಷಕರು ಮತ್ತು ವಿದ್ಯಾರ್ಥಿಗಳಲ್ಲಿ ತಮ್ಮ ಜೀವನವನ್ನು ಪ್ರತಿ ಪಕ್ಷಪಾತವಿಲ್ಲದೆ ಮೌಲ್ಯಮಾಪನ ಮಾಡಲು ಸಹಾಯಕವಾಗಿದ್ದು, ನಂತರ 'ಸರಿ' ಮತ್ತು 'ತಪ್ಪು' ನಡುವೆ ನಿರ್ಧರಿಸುವ ಆಧಾರವಾಗಿರುತ್ತದೆ.
- ● ಮೂಲಭೂತ ಮತ್ತು ರೂಪದ ನಡುವೆ ವ್ಯತ್ಯಾಸ ಸಾಮರ್ಥ್ಯ; ಅಥವಾ ಜೀವನದಲ್ಲಿ ಮೌಲ್ಯವುಳ್ಳ ವಸ್ತು ಹಾಗೂ ಬಾಹ್ಯನೋಟಕ್ಕೆ ಸೀಮಿತವಾದ ವಸ್ತುವಿನ ನಡುವೆ ವ್ಯತ್ಯಾಸವನ್ನು ಅರಿಯುವ ಸಾಮರ್ಥ್ಯ.
- ● ಗುಣಾತ್ಮಕ ರೂಪಾಂತರ-ಅಧಿಕ ಬೌದ್ಧಿಕ ವಿಕಾಸ ಹಾಗೂ ಪ್ರಜ್ಞೆ ಅರಿವಿನ ಸಕ್ರಿಯತೆ.
  - ○ ಮಾಹಿತಿಯ ವರ್ಗಾವಣೆಯಷ್ಟೇ ಅಲ್ಲದೆ, ಶಿಕ್ಷಕರ ಹಾಗೂ ವಿದ್ಯಾರ್ಥಿಯರ ಮೌಲ್ಯಗಳು ಮಾತು ಪ್ರಜ್ಞೆಯ ಸ್ತರದಲ್ಲಿ ಪರಿವರ್ತನೆ.

ಒಟ್ಟಾರೆಯಾಗಿ ಹೇಳುವುದಾದರೆ ಶಿಕ್ಷಕರಾದವರು ವಿದ್ಯಾರ್ಥಿಗಳನ್ನು ಅರ್ಥಮಾಡಿ ಕೊಂಡು ಅವರ ಕಲಿಕೆಯನ್ನು ಪ್ರೋತ್ಸಾಹಿಸಬೇಕಾಗಿರುತ್ತದೆ. ಶಿಕ್ಷಕರು ಹೆಚ್ಚಿನ ಜ್ಞಾನವನ್ನು ಹೊಂದಿ, ತರಬೇತಿಯನ್ನು ಪಡೆದು, ಉತ್ತಮ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಂಡು ಮಕ್ಕಳನ್ನು ಅರ್ಥಮಾಡಿಕೊಂಡು ಅವರ ಮನಸ್ಥಿತಿಗೆ ಹೊಂದಿಕೊಂಡು ಬೋಧನೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು. ಶಿಕ್ಷಕರು ಉತ್ತಮ ಮೌಲ್ಯಗಳನ್ನು ಬೆಳೆಸಿಕೊಂಡು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವಂತಾಗಬೇಕು. ಪಠ್ಯಕ್ರಮ ಬೋಧನಾ ವಿಧಾನಗಳನ್ನು ಅರಿತು ಸಂದರ್ಭೋಚಿತವಾಗಿ ತರಗತಿ ಪ್ರಕ್ರಿಯೆಗೆ ಹೊಂದಿಸಿಕೊಳ್ಳು ವಂತಿರಬೇಕು. ಶಿಕ್ಷಕರಾದವರು ಮುಂದಿನ ವಿದ್ಯಾರ್ಥಿ ಸಮುದಾಯವನ್ನು ಚಿಂತನೆಗೆ ಒಳಪಡಿಸುವಂಥವರಾಗಿ ಕಲಿಕೆಯ ಪ್ರಕ್ರಿಯೆಗೆ ಪ್ರೋತ್ಸಾಹದಾಯಕರಾಗಿರಬೇಕು.

## ಪರಾಮರ್ಶನೆ


1. NCFTE 2010, Ch 1, Pg 1, NCTE
2. NCFTE 2010, Ch 1, Pg 3, NCTE
3. Madhyasth Darshan (Astitva moolak maanav kendrit chintan) by Nagaraj A, Divyapath Sansthan, Amarkantak. MP. *The author of this paper is a student of this philosophy.*
4. Cheek, Jonathan M. 1989. Identity orientations and self-interpretation. In *Personality psychology: Recent trends and emerging directions*, edited by D.M. Buss and N. Cantor, 275–85. New York: Springer-Verlag.
5. Nagraj A, 1999, 'Jeevan Vidya': Jeevan Vidya ek Parichay, Jeevan Vidya prakasana, Amarkantak. MP. Ch 4, pg 41
6. Nikolas Rose.1998. Inventing ourselves: Psychology, power and personhood; Cambridge, Cambridge university press, 3.
7. Walkington J, 2005. Becoming a teacher: encouraging development of teacher identity through reflective practice, Asia-Pacific Journal of Teacher Education Vol. 33, No. 1, pp. 53–64)
8. Larrivee B. 2000, Transforming teacher practice: Becoming the critically reflective teacher. Reflective Practice, 1, 293–307.
9. Freire P. (1998). Pedagogy of freedom: Ethics, democracy and civic courage. Lanham, MD: Rowman and Little.
10. NCFTE, 2010, Ch 2, Pg 24, NCTE.
11. Baumeister R.F. (Ed.) 1999. The self in social psychology. Philadelphia, PA: Psychology Press (Taylor and Francis).
12. Lewis, M. 1990. Self-knowledge and social development in early life. In L. A. Pervin (Ed.) Handbook of personality. pp 277-300. New York: Guilford.
13. Nagaraj A. 1978, 'Srushti Darshan', Manav Vyavahar Darshan, Jeevan Vidya Prakasana, Amarkantak, MP. Ch 1
14. Nagaraj. A.1999. 'Jeevan ka Svaroop', Jeevan Vidya Ek Parichay. Jeevan vidya prakasana, Amarkantak, MP. Ch 3. Pg 79
15. Nagraj A, 1999, 'moulik adhikar', Vyavharvadi Samajashastra. Jeevan vidya prakasana. Jeevan vidya

prakasana, Amarkantak, MP. Ch 6. Pg 163.
16. Calderhead J. 1987. Teaching as a professional activity. Exploring teachers'thinking. Ch 9.
17. Nagraj A, 1988. 'Shiksha ka laghu prastav' – An article.
18. Nagaraj. A. 1978, 'Nirbhramata hi vishram', Manav Vyavahar Darshan, Jeevan Vidya Praskasana, Amarkantak, MP. Ch 5.
19. Bruner, J. 1977. The process of education. New York, NY: Random House.
20. Dewey, J. 1933. How we think: A restatement of the relation of reflective thinking to the educative process. Boston, MA: D. C. Heath.
21. Nagaraj A, 2000, 'drishta, karta, bhokta', Anubhavtmak Adhyatmvad. Jeevan Vidya Prakasana. Divyapath Sansthan, Amarkantak, MP. Ch 6, pg 209.
22. Mayer, D. 1999. Building teaching identities: implications for pre-service teacher education, paper presented to the Australian Association for Research in Education, Melbourne. pp. 6–7.
23. NCFTE, 2010, ch 1 pg 21.
24. Clinchy, B. V. 2003. An epistemological approach to the teaching of narrative research. In R. Josselson, A. Lieblich & D. P. Mc Adams (Eds.), Up close and personal. Washington, D. C : American Psychological Research Association.
25. Nagaraj A. Madhyasth Darshan, Vol 1-14.

**ಗೌರಿ ಶ್ರೀಹರಿ** : ಮೈಸೂರಿನವರಾದ ಇವರು ಫುಡ್ ಸೈನ್ಸ್ ಆಂಡ್ ನ್ಯೂಟ್ರಿಷನ್‌ನಲ್ಲಿ ಸ್ನಾತಕೋತ್ತರ ಪದವೀಧರರು. ಪ್ರಸ್ತುತ ಮಧ್ಯ ಪ್ರದೇಶದ ಅಮರ್‌ಕಂಟಕ್‌ನ 'ದಿವ್ಯಪಥ್ ಸಂಸ್ಥಾನ' ಎಂಬ ಶಿಕ್ಷಣ ಸಂಸ್ಥೆಯಲ್ಲಿ ಸುಗಮಗಾರರಾಗಿದ್ದಾರೆ. ಮಾನವೀಯ ಶಿಕ್ಷಣದಿಂದ ಚೇತನಾ ವಿಕಾಸ ಹಾಗೂ ಪರಸ್ಪರ ಸಾಮರಸ್ಯ ಸಾಧಿಸಬೇಕೆಂಬ ಗುರಿಯೊಂದಿಗೆ ಸಮಗ್ರ ಅರಿವನ್ನು ಉಂಟುಮಾಡುವ ಶೈಕ್ಷಣಿಕ ಕಾರ್ಯದಲ್ಲಿ ನಿರತರಾಗಿದ್ದಾರೆ.

*ಸಂಪರ್ಕ:* gowrisrihari@gmail.com